# ಮಣ್ಣಿಂದ ಕಾಯ ಮಣ್ಣಿಂದ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Note:** Singer has followed these lyrics except one word which is marked in grey highlights.
3. **Note:** Unable to upload this pravachana in this website. Those who are interested can listen to the same through this link: (by just pressing on this link) https://soundcloud.com/shriharivayu-gurugalu/manninda-kaaya-expln-by-smtmeera-tadipatri

ರಾಗ: ಶಂಕರಾಭರಣ ತಾಳ: ಅಟ

ಮಣ್ಣಿಂದ ಕಾಯ ಮಣ್ಣಿಂದ || ಪ ||

ಮಣ್ಣಿಂದ ಸಕಲ ದರುಶನಗಳೆಲ್ಲ
ಮಣ್ಣಿಂದ ಸಕಲ ವಸ್ತುಗಳೆಲ್ಲ
ಮಣ್ಣು ಬಿಟ್ಟವರಿಗೆ ಆಧಾರವಿಲ್ಲ
ಅಣ್ಣಗಳಿರೆಲ್ಲರು ಕೇಳಿರಯ್ಯ || ಅಪ ||

ಅನ್ನ ಉದಕ ಊಟವೀಯೋದು ಮಣ್ಣು
ಬಣ್ಣ ಭಂಗಾರ ಬೊಕ್ಕಸವೆಲ್ಲ ಮಣ್ಣು
(ಉನ್ನತವಾದ) (ಉನ್ನಂತವಾದ) ಪರ್ವತವೆಲ್ಲ ಮಣ್ಣು
ಕಣ್ಣು ಮೂರುಳ್ಳನ ಕೈಲಾಸ ಮಣ್ಣು || 1 ||

ದೇವರ ಗುಡಿ ಮಠ ಮನೆಯೆಲ್ಲ ಮಣ್ಣು
ಆವಾಗ ಅಡುವ ಮಡಕೆಯು ತಾ ಮಣ್ಣು
ಕೋವಿದರಸರ ಕೋಟೆಗಳೆಲ್ಲ ಮಣ್ಣು
ಪಾವನ ಗಂಗೆಯ ತಡಿಯೆಲ್ಲ ಮಣ್ಣು || 2 ||

ಭಕ್ತ ಭರಣ ಧಾನ್ಯ ಬೆಳೆವುದೆ ಮಣ್ಣು
ಸತ್ತವರನು ಹೂಳಿ ಸುಡುವುದೆ ಮಣ್ಣು
ಉತ್ತಮವಾದ ವೈಕುಂಠವೆ ಮಣ್ಣು
ಪುರಂದರ ವಿಠಲನ್ನ ಪುರವೆಲ್ಲ ಮಣ್ಣು || 3 ||

**Classification:** Keerthane
**Ankita:** purandara vittala
**Location:** NA
**Category:** Jeevana Sutra, Tatva Jnana
**Sub-Category:** deha, anna, niru, oota, bangara, parvata, shiva, kannu, deva, arasa, gange, dhanya, vaikunta, marana,
**Pravachana:** Smt. Meera Tadipatri
**Explanation:** NA